# ಇದು ಬೊಂಬೆ ಲೋಕವಯ್ಯ...



■ ಸುಧಾ ಹೆಗಡೆ

ಚಿತ್ರಗಳು: ವಿಶ್ವನಾಥ ಸುವರ್ಣ

ಗುಲಾಲ್ ರಂಗಿನಲ್ಲಿ ಚಮಕ್ಕೆನ್ನುವ ಗುಜರಾತ್‌ನ ದಾಂಡಿಯಾ, ಗರ್ಭಾ ನರ್ತಕಿಯರು.. ಅಬ್ಬರದ ಯಕ್ಷಗಾನ ಕಲಾವಿದರು.. ಲಾಸ್ಯದ ಮಣಿಪುರಿ ನರ್ತಕಿ.. ಒಡಿಸ್ಸಿಯ ಮೋಹಕತೆ, ಕಥಕ್ಕಳಿಯ ಸಮ್ಮೋಹನ.. ಜೊತೆಗೆ ತಲೆದೂಗುವ ಜಪಾನ್ ಸುಂದರಿ.. ಕಳಶಪ್ರಾಯ ವಧೂವರರು.. ಮುಂದೆ ಗಂಭೀರವಾಗಿ ನಿಂತ ದಸರಾ ಆನೆಗಳು.. ಇದು ಬೊಂಬೆ ಲೋಕ!

ಉಣ್ಣೆ, ಹತ್ತಿ ಬಟ್ಟೆ, ವೈರ್‌ನಿಂದ ಮೂಡಿ ಬರುವ ಮುದ್ದಾದ ಬೊಂಬೆಗಳ ಕಲಾವೈಖರಿಯೇ ಅದ್ಭುತ. ಆ ಬೊಂಬೆಗಳಿಗೆ ಬಣ್ಣ ಬಣ್ಣದ ಮಣಿಗಳು, ಟೇಪ್‌ಗಳ ಅಲಂಕಾರ. ಮುಖಕ್ಕೊಂದಿಷ್ಟು ಮೇಕಪ್. ಮರದ ಚೌಕಟ್ಟಿನ ಮೇಲೆ ಬ್ಯಾಲೆನ್ಸ್ ಮಾಡುತ್ತ ನಿಂತರೆ ರಷ್ಯನ್ ಬ್ಯಾಲೆ ಕಲಾವಿದೆಗೊಂದು ಆಸರೆ ಕೊಡೋಣ ಎಂಬ ಭಾವ ಸ್ಫುರಿಸುತ್ತದೆ. 'ಆದರೆ ಈ ಬೊಂಬೆಗಳೆಲ್ಲ ಫ್ಲೆಕ್ಸಿಬಲ್, ಅನ್‌ಬ್ರೇಕೇಬಲ್' ಎನ್ನುತ್ತಾರೆ ಇವುಗಳ ಸೃಷ್ಟಿಕರ್ತೆ ಬೆಂಗಳೂರಿನ ಎನ್.-ವಿಜಯಾ ಜೋಯಿಸ್. ಎಚ್‌ಎಂಟಿ ಉದ್ಯೋಗದಿಂದ ಸ್ವಯಂ ನಿವೃತ್ತಿ ಪಡೆದಿರುವ

(20ನೇ ಪುಟ ನೋಡಿ)

